ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2024/19 ದಿನಾಂಕ : 25/4/24

## ಸುತ್ತೋಲೆ

**ವಿಷಯ:- ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ರ ಅಡಿಯಲ್ಲಿ ಎಲ್ಲ ಸ್ನಾತಕ ಜನೇವರಿ/ಫೆಬ್ರುವರಿ 2024ರಲ್ಲಿ ಜರುಗಿದ 1,3 ಹಾಗೂ 5ನೇ ಸೆಮಿಸ್ಟರ ವಿದ್ಯಾರ್ಥಿಗಳ ಪರೀಕ್ಷಾ ವಿವರಗಳನ್ನು (UUCMS) ತಂತ್ರಾಂಶದಲ್ಲಿ ಅಳವಡಿಸುವ ಕುರಿತು.**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ರ ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಜನೇವರಿ/ಫೆಬ್ರುವರಿ 2024ರಲ್ಲಿ ಜರುಗಿದ 1,3 ಹಾಗೂ 5ನೇ ಸೆಮಿಸ್ಟರ ಪರೀಕ್ಷೆಗಳ ಮೌಲ್ಯಮಾಪನ ಪ್ರಕ್ರಿಯೆ ಕೊನೆಗೊಂಡಿದ್ದು, ಫಲಿತಾಂಶ ಪ್ರಕಟಿಸುವ ಹಂತದಲ್ಲಿ ಇರುತ್ತದೆ. ಆದ್ದರಿಂದ (UUCMS) ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದ ವರದಿಯನ್ನು ಈ ವರೆಗೆ ಯಾರಾದರೂ ಬ್ಲಾಕ್‌ವೈಸ್ (Blockwise) ಹಾಜರಾತಿ ವರದಿಯನ್ನು ನಮೂದಿಸದಿದ್ದಲ್ಲಿ ದಿನಾಂಕ: 30/04/2024ರೊಳಗಾಗಿ ನಮೂದಿಸಲು ಸೂಚಿಸಲಾಗಿದೆ.

1) Theory Block Creation.
2) Attendence
3) Internal Marks Entry & Approve
4) Packeting
5) Value Based Activities Internal Assessment Marks (VBA)

ಮುಂದುವರೆದು, ಸದರ ಮಾಹಿತಿಯನ್ನು 30/04/2024 ದಿನಾಂಕದಳೊಗಾಗಿ ಸರಿಪಡಿಸಿಕೊಳ್ಳದೇ ಇದ್ದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರರೇ ಹೊಣೆಗಾರರಾಗುತ್ತಾರೆ. ಅಲ್ಲದೇ ಅಂತಹ ಮಹಾವಿದ್ಯಾಲಯಗಳ ಪರೀಕ್ಷಾ ಫಲಿತಾಂಶವನ್ನು ಬಿಟ್ಟು ಮಾಹಿತಿ ಪೂರೈಸಿದ ಮಹಾವಿದ್ಯಾಲಯಗಳ ಫಲಿತಾಂಶ ಪ್ರಕಟಿಸಲಾಗುವುದು. ಸಂಬಂಧಿಸಿದ ಮಹಾವಿದ್ಯಾಲಯದವರು ಹೆಚ್ಚಿನ ಮಾಹಿತಿ ಹಾಗೂ ತಾಂತ್ರಿಕ ಅಡಚಣೆಗೆ ಗಣಕಯಂತ್ರ ವಿಭಾಗದ ದೂರವಾಣಿ ಸಂಖ್ಯೆ. 0836-2215261ಗೆ ಸಂಪರ್ಕಿಸಲು ತಿಳಿಸಲಾಗಿದೆ.

**ಸೂಚನೆ: ಕಳೆದ 2023ರಲ್ಲಿ ಜರುಗಿದ ಸ್ನಾತಕ ಕೋರ್ಸಿನ ಯು.ಯು.ಸಿ.ಎಮ್.ಎಸ್ (UUCMS) ತಂತ್ರಾಂಶದಡಿ 2ನೇ ಮತ್ತು 4ನೇ ಸೆಮಿಸ್ಟರಗಳ ಫಲಿತಾಂಶಗಳು ಪ್ರಕಟಗೊಂಡಿದ್ದು, ತಮ್ಮ ಕಾಲೇಜಿನ ಯಾವುದಾದರೂ ವಿದ್ಯಾರ್ಥಿಗಳ ಫಲಿತಾಂಶವು ಪ್ರಕಟವಾಗದಿದ್ದರೆ ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ ಪ್ರತಿ, ಪ್ರವೇಶ ಪತ್ರ, ಆಯಾ ಸೆಮಿಸ್ಟರನ ಎಲ್ಲಾ ವಿಷಯಗಳ ಹಾಜರಾತಿ ಲಗತ್ತಿಸಿ ಆಯಾ ವಿಭಾಗಗಳ ಅಧೀಕ್ಷಕರಿಗೆ ದಿನಾಂಕ:30.04.2024ರೊಳಗಾಗಿ ಅರ್ಜಿಸಲ್ಲಿಸ ಬಹುದಾಗಿದ್ದು ನಂತರದ ಅವಧಿಯಲ್ಲಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು. ಈ ಮೂಲಕ ತಿಳಿಸಲಾಗಿದೆ.**

25/4

ಕುಲಸಚಿವರು(ಮೌಲ್ಯಮಾಪನ)

ಗೆ,

ಪ್ರಾಚಾರ್ಯರು ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಎಲ್ಲ ಅಧೀನ ಮಹಾವಿದ್ಯಾಲಯಗಳು

ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಸಿಸ್ಟಮ್ ಅನಾಲಿಸ್ಟ, ಗಣಕಯಂತ್ರ ಕೇಂದ್ರ ಪರೀಕ್ಷಾ ವಿಭಾಗ, ಕ.ವಿ.ವಿ ಧಾರವಾಡ.
2. ಉಪ ಕುಲಸಚಿವರು, ವಿದ್ಯಾಮಂಡಳ ವಿಭಾಗ, ಕ.ವಿ.ವಿ ಧಾರವಾಡ.
3. ಉಪ ಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ ಧಾರವಾಡ.
4. ಪರೀಕ್ಷಾ ವಿಭಾಗದ ಎಲ್ಲ ಶಾಖೆಗಳ ಅಧೀಕ್ಷಕರ ಮಾಹಿತಿಗಾಗಿ
5. ಕುಲಪತಿಗಳು/ಕುಲಸಚಿವರು/ಕುಲಸಚಿವರ (ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ ಧಾರವಾಡ.
6. ನಿರ್ದೇಶಕರು ಅಂತರ್ಜಾಲ ವಿಭಾಗ ಕ.ವಿ.ವಿ ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.